ದ್ದಾರೆ. ಆಲ್ಲಿರುವ ಸರ್ಕಾರದ ಜಮೀನಿಗೆ ಪರಿಹಾರ ಕೊಡುವುದಕ್ಕಾಗುವುದಿಲ್ಲ. ಅಲ್ಲಿ ಪರಿಹಾರ ಕೊಡಬೇಕಾದರೆ ಕೆಲವರಿಗೆ ಮಾತ್ರ ಕೊಡಬೇಕಾಗುತ್ತದೆ. ಅದನ್ನು ಆದಷ್ಟು ಜಾಗ್ರತೆಯಾಗಿ ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಸಂಸ್ಥೆ ಮತ್ತು ಧರ್ಮಸ್ಥಳಗಳ ನಡುವೆ ರಸ್ತೆ ಕಾಮಗಾರಿ ಬಗ್ಗೆ

ಶ್ರೀ (ಡಾ॥) ಶ್ರೀ ಪಿ. ತಿಪ್ಪಯ್ಯ (ಮಂಡಿಗೆರೆ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಸಂಸ್ಥೆ ಮತ್ತು ಧರ್ಮಸ್ಥಳಗಳ ನಡುವೆ ರಸ್ತೆ ಕಾಮಗಾರಿಯ ಬಗ್ಗೆ ಸಮೀಕ್ಷೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಸರ್ಕಾರದವರು ಈ ಬಗ್ಗೆ ಕೈಗೊಂಡಿರುವ ಕ್ರಮವೇನು ?

ಇ) ಸಂಪರ್ಕ ಕಲ್ಪಿಸಿದರೆ ಕಳಸಕ್ಕೆ ಹಾಗೂ ಶೃಂಗೇರಿಗೆ ಸುತ್ತು ಬಳಕೆ ಕಡಿಮೆ ಆಗುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ ಸದರಿ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಲಾಗುವುದೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಸಮೀಕ್ಷೆ ಕಾರ್ಯವು ಮುಂಡಾಜೆಯಿಂದ ದಿಡುಪೆ ಪರೆಗೆ ೧೪.೫ ಕಿ.ಮಿ. ಮುಗಿದಿದೆ.

ಆ) ದಿಡುಪೆ ಮತ್ತು ಸಂಸ್ಥೆ ವಿಭಾಗದಲ್ಲಿ (ಸುಧಾರಣೆಯ ಕಾರ್ಯಕ್ರಮದಂತೆ) ೧೬.೫ ಕಿ.ಮಿ. ಉದ್ದದಲ್ಲಿ ಸಮೀಕ್ಷೆಯ ಕಾರ್ಯವು ನಡೆಯುತ್ತಿದೆ.

ಇ) ಹೌದು

(ಈ) ಸಮೀಕ್ಷೆ ಕಾರ್ಯ ಪೂರ್ಣಗೊಂಡ ನಂತರ ಅಂದಾಜು ಪಟ್ಟಿಗೆ ಅನುಮೋದನೆಯನ್ನು ನೀಡಿ ಕೆಲಸವನ್ನು ಪ್ರಾರಂಭಿಸಲಾಗುವುದು.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರು ಇದರ ಬಗ್ಗೆ ಪ್ರಶ್ನೆಯನ್ನು ಕೇಳುವುದಕ್ಕಿಂತ ಮುಂಚಿತವಾಗಿ ಈ ಒಂದು ವಿಚಾರವನ್ನು ಅವರ ಗಮನಕ್ಕೆ ತರಬಯಸುತ್ತೇನೆ. ಅದೇನೆಂದರೆ ಈ ಒಂದು ಕಾಮಗಾರಿಗೆ ೫೦ ಲಕ್ಷ ರೂಪಾಯಿಗಳು ಖರ್ಚಾಗುತ್ತದೆ. ಇದರ ಬಗ್ಗೆ ಇರ ತಕ್ಕಂಥ ವರದಿ ಆಧಾರದ ಮೇಲೆ ಹೇಳುತ್ತಿದ್ದೇನೆ. ಹಿಂದಿನ ವರ್ಷ ಈ ಕಾರ್ಯಕ್ಕೆ ಹಣ ಒದಗಿಸುವುದಕ್ಕೆ ಸರ್ವೆ ಕೆಲಸ ಮುಗಿದಿರಲಿಲ್ಲ. ಇದರ ಬಗ್ಗೆ ಸರ್ವೆ ಕೆಲಸ ಮುಗಿದ ಮೇಲೆ ಈ ಕೆಲಸವನ್ನು ಎಕನಾಮಿಕಲಿ ಇಂಪಾರ್ಟ್‌ಟೆಂಟ್ ಎಂದು ಪರಿಗಣಿಸಿ ತೆಗೆದುಕೊಳ್ಳಬೇಕಾಗುತ್ತದೆ. ಇದರಿಂದ ೫೦ ಕಿಲೋ ಮೀಟರ್ ಆಪ್ಟು ರಸ್ತೆ ಉದ್ದ ಕಡಿಮೆಯಾಗುತ್ತದೆ. ಈ ರಸ್ತೆ ಕೆಲಸವನ್ನು ತೆಗೆದುಕೊಳ್ಳಬೇಕಾದರೆ ಇದನ್ನು ಕೇಂದ್ರ ಸರ್ಕಾರದ ಸಹಾಯದಿಂದ ಮಾಡಬೇಕು. ಅವರು ಅರ್ಧ ಭಾಗ ಕೊಡುತ್ತಾರೆ, ನಾವು ಅರ್ಧ ಭಾಗ ಹಾಕಬೇಕಾಗುತ್ತದೆ. ಇದರ ಬಗ್ಗೆ ಸರ್ವೆ ಕೆಲಸ ಮುಗಿದ ತಕ್ಷಣ ಈ ಕೆಲಸವನ್ನು ಸರ್ಕಾರ ತೆಗೆದುಕೊಳ್ಳುವುದಕ್ಕೆ ಪರಿಶೀಲನೆ ಮಾಡುತ್ತದೆ.

ಶ್ರೀ ಪಿ. ತಿಪ್ಪಯ್ಯ.—ಈ ಬಗ್ಗೆ ಪತ್ರಿಕೆಯಲ್ಲೂ ಕೂಡ ಬಂದಿದೆ. ಇದರ ಬಗ್ಗೆ ಕೇಂದ್ರ ಸರ್ಕಾರದವರು ಏನು ಹಣ ಕೊಡಬೇಕೋ ಅದನ್ನು ಕೊಟ್ಟಿದ್ದಾರೆ ಆದರೆ ಇವರು ಕೆಲಸ ಮಾಡುತ್ತಾ ಇಲ್ಲ ಎಂದು. ಅಲ್ಲದೆ ಇದರ ಬಗ್ಗೆ ಒಬ್ಬರು ಪಾರ್ಲಿಮೆಂಟರಿ ಮೆಂಬರ್ ಕೂಡ ಹೇಳಿದ್ದಾರೆ. ಇದರ ಬಗ್ಗೆ ತಾವು ಸ್ಪಷ್ಟೀಕರಣ ಕೊಡುತ್ತೀರಾ ಸ್ವಾಮಿ ?

ಶ್ರೀ ಹೆಚ್. ಡಿ. ದೇವೇಗೌಡ.—ಪಾರ್ಲಿಮೆಂಟರಿ ಮೆಂಬರ್ ಈ ಬಗ್ಗೆ ಹೇಳಿಕೆ ಕೊಟ್ಟಿರುವುದರ ಬಗ್ಗೆ ನನ್ನ ಗಮನಕ್ಕೂ ಕೂಡ ಬಂದಿದೆ. ಕೇಂದ್ರ ಸರ್ಕಾರದವರು ಇದಕ್ಕೆ ಗ್ರಾಂಟ್ ಕೊಡುವುದಿಲ್ಲ. ಅವರು ಎಕನಾಮಿಕ್ ಇಂಪಾರ್ಟೆನ್ಸ್‌ನಲ್ಲಿ ಕೊಡಬೇಕಾಗುತ್ತದೆ. ಅದನ್ನು ಇದನ್ನೂ ಕೊಟ್ಟಿಲ್ಲ. ನಮಗೆ ಅವರಿಂದ ಯಾವ ರೀತಿಯಾಗಿಯೂ ಹಣ ಬಂದಿಲ್ಲ. ಇದರ ಬಗ್ಗೆ ಸರ್ವೆ ಕಾರ್ಯ ಮುಗಿದ ಮೇಲೆ ಈ ಕೆಲಸ ತೆಗೆದುಕೊಳ್ಳಬೇಕಾಗುತ್ತದೆ. ಅವರು ಎಕನಾಮಿಕ್ ಇಂಪಾರ್ಟೆನ್ಸ್ ಮೇಲೆ ಕೊಟ್ಟರೂ ಕೂಡ ಅದನ್ನು ಸಾಲದ ರೂಪದಲ್ಲಿ ಅರ್ಧ ಭಾಗ ಕೊಡುತ್ತಾರೆ.